ಆ) ಈ ವರ್ಷ ಹೊಸದಾಗಿ, ಜೂನಿಯರ್ ಕಾಲೇಜನ್ನು ಸ್ಥಾಪಿಸುವ, ಆಲೋಚನೆ ಸರ್ಕಾರಕ್ಕೆ ಇದೆಯೇ.

ಇ) ಹಾಗಿದ್ದಲ್ಲಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಯಲ್ಲೂರು, ರೋಣೂರುನಲ್ಲಿ ಕಾಲೇಜು ಸ್ಥಾಪಿಸುವ ಬಗ್ಗೆ ಸರ್ಕಾರ ತೀರ್ಮಾನ ಕೈಗೊಂಡಿದೆಯೇ.

ಈ) ಯಲ್ಲೂರು ಮತ್ತು ರೋಣೂರುಗಳ ಸುತ್ತಮುತ್ತ ಹೈಸ್ಕೂಲ್ ಹೆಚ್ಚಾಗಿರುವುದರಿಂದ ಹಿಂದುಳಿದ ಬಡ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಇವರ ಅನುಕೂಲಕ್ಕಾಗಿ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವುದೇ?

ಸ್ಥಳೀಯ ಶೈಕ್ಷಣಿಕ ಅಗತ್ಯತೆ ಮತ್ತು ಸಂಪನ್ಮೂಲದ ಲಭ್ಯತೆಯ ಆಧಾರದ ಮೇಲೆ ನಿರ್ಣಯ ಕೈಗೊಳ್ಳಲಾಗುವುದು.

ಸಂಖ್ಯೆ.ಇಡಿ 16 ಎಸ್‌ಹೆಚ್‌ಹೆಚ್ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

185 ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು

ಅ. ಕೇಂದ್ರ ಸರ್ಕಾರದಿಂದ 12ನೇ ಹಣಕಾಸಿನ ಯೋಜನೆಗೆ 2008–09ನೇ ಸಾಲಿನಲ್ಲಿ ರಾಜ್ಯಕ್ಕೆ ಬಿಡುಗಡೆಯಾಗಿರುವ ಹಣ ಎಷ್ಟು;

ಕೇಂದ್ರ ಸರ್ಕಾರದಿಂದ 12ನೇ ಹಣಕಾಸಿನ ಯೋಜನೆಯಡಿ 2008–09ನೇ ಸಾಲಿನಲ್ಲಿ ರಾಜ್ಯಕ್ಕೆ ಮೊದಲ ಕಂತಾಗಿ ರೂ. 8880.00 ಲಕ್ಷಗಳು ಬಿಡುಬಡೆಯಾಗಿರುತ್ತದೆ.

ಆ. ಈ ಹಣ ಖರ್ಚು ಮಾಡಲು ಕೇಂದ್ರ ಸರ್ಕಾರದ ಮಾರ್ಗಸೂಚಿಗಳೇನು;

ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ. ಸ್ಥಳೀಯ ಸಂಸ್ಥೆಗಳಿಗೆ ಈ ಹಣವನ್ನು ಸಮಾನಾಂತರವಾಗಿ ಹಂಚಲಾಗಿದೆಯೆ?

ಜನಸಂಖ್ಯೆ ಆಧಾರದ ಮೇರೆಗೆ ಹಣವನ್ನು ಸ್ಥಳೀಯ ಸಂಸ್ಥೆಗಳಿಗೆ ಸಮಾನಾಂತರವಾಗಿ ಹಂಚಿಕೆ ಮಾಡಲಾಗುತ್ತದೆ.

ಸಂಖ್ಯೆ : ಗ್ರಾಅಪ:19:ಗ್ರಾಪಸ:2009

(ಶೋಭಾ ಕರಂದ್ಲಾಜೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು

ಅನುಬಂಧ–1
12ನೇ ಹಣಕಾಸು ಆಯೋಗದ ಅನುದಾನ ಬಳಕೆಯ ಮಾರ್ಗಸೂಚಿಗಳು

12ನೇ ಹಣಕಾಸು ಆಯೋಗವು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಾಗರಿಕ ಸೌಲಭ್ಯ ಕಾರ್ಯಕ್ರಮಗಳಿಗಾಗಿ ನಿಗದಿ ಮಾಡಿರುವ ಅನುದಾನವನ್ನು 3 ಹಂತದ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳು ತಲಾ ಶೇಕಡಾ 70:20:10 ರಂತೆ ಕ್ರಮವಾಗಿ ಪಡೆಯುತ್ತವೆ.

ರಾಜ್ಯವು ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳಿಗೆ ಪೂರಕವಾಗಿ 2005–06 ರಿಂದ 2009–10 ರವರೆಗಿನ ಐದು ವರ್ಷಗಳ ಅವಧಿಗೆ ನಿಗದಿಯಾಗಿರುವ ಅನುದಾನವನ್ನು ವಿವಿಧ ಕಾರ್ಯಕ್ರಮಗಳಿಗೆ ಈ ಕೆಳಕಂಡ ಮಾರ್ಗಸೂಚಿಯನ್ವಯ ಉಪಯೋಗಿಸತಕ್ಕದ್ದು:

ಗ್ರಾಮ ಪಂಚಾಯಿತಿ:

1) ನೀರು ಸರಬರಾಜು ಯೋಜನೆಗಳಡಿ ದುರಸ್ತಿ, ಆಧುನಿಕರಣ ಹಾಗೂ ನಿರ್ವಹಣೆ
2) ನೈರ್ಮಲ್ಯ ಕಾರ್ಯಕ್ರಮಗಳಾದ ಒಳಚರಂಡಿ ಹಾಗೂ ಪಾದಚಾರಿ ರಸ್ತೆಗಳು,
3) ನೀರು ಸರಬರಾಜು ಯೋಜನೆ, ಅಂತರ್ಜಲ ವೃದ್ಧಿ ಹಾಗೂ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆ
4) ಬಡ ಕುಟುಂಬಗಳಿಗೆ ಮಳೆನೀರು ಕೊಯ್ಲು ಪದ್ಧತಿಯನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳುವುದು
5) ಊರಿಗೊಂದು ಕೆರೆ ಊರಿಗೊಂದು ವನ ನಿರ್ಮಾಣ
6) ಗ್ರಾಮ ಪಂಚಾಯಿತಿಗಳ ಗಣಕೀಕರಣ, ಡಾಟಾಬೇಸ್ ಹಾಗೂ ಲೆಕ್ಕಪತ್ರ ನಿರ್ವಹಣೆ ಮತ್ತು ಸೃಜನೆ
7) ಗ್ರಾಮ ಪಂಚಾಯತಿಗಳ ಕಟ್ಟಡಗಳು

ತಾಲ್ಲೂಕು ಪಂಚಾಯಿತಿ

1) ಗ್ರಾಮೀಣ ಮಾರುಕಟ್ಟೆ ಮೂಲಭೂತ ಸೌಲಭ್ಯಗಳನ್ನು ಸೃಜಿಸುವುದು, ಅಭಿವೃದ್ಧಿಪಡಿಸುವುದು.
2) ಕೃಷಿ ಮಾರುಕಟ್ಟೆ ಪ್ರಾಂಗಣಗಳ ಅಭಿವೃದ್ಧಿ ಹಾಗೂ ನಿರ್ವಹಣೆ
3) ವಾರದ ಮಾರುಕಟ್ಟೆಸಂತೆ ಮೈದಾನಗಳ ಅಭಿವೃದ್ಧಿ ಮತ್ತು ನಿರ್ವಹಣೆ

4) ಸರ್ಕಾರಿ ಪ್ರೌಢ/ ಪ್ರಾಥಮಿಕ ಶಾಲೆಗಳಿಗೆ ಕಂಪ್ಯೂಟರ್ ಡೆಸ್ಕ್, ಕ್ರೀಡಾ ಸಾಮಗ್ರಿಗಳನ್ನು ಒಳಗೊಂಡಂತೆ ಸಲಕರಣೆ ಹಾಗೂ ಸಾಮಗ್ರಿಗಳ ಸರಬರಾಜು, ಪ್ರಯೋಗ ಶಾಲೆ ಸಾಮಗ್ರಿಗಳು ಹಾಗೂ ವಿತರಣೆ
5) ಅಂಗನವಾಡಿ ಕಟ್ಟಡಗಳು
6) ತಾಲ್ಲೂಕು ಪಂಚಾಯಿತಿಗಳ ಗಣಕೀಕರಣ, ಡಾಟಾಬೇಸ್ ಹಾಗೂ ಲೆಕ್ಕ ಪತ್ರ ನಿರ್ವಹಣೆ ಮತ್ತು ಸೃಜನೆ.

<u>ಜಿಲ್ಲಾ ಪಂಚಾಯತ್</u>

1) ಜಿಲ್ಲಾ ಪಂಚಾಯತಿಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವ ಕಡೆಗಳಲ್ಲಿ ಜಿಲ್ಲಾ ಪಂಚಾಯತ್ ಕಚೇರಿ ಕಟ್ಟಡಗಳ ನಿರ್ಮಾಣ ಹಾಗೂ ಪೀಠೋಪಕರಣ,
2) ಅಸಾಂಪ್ರದಾಯಕ ಇಂಧನ ಮೂಲಗಳಾದ ಸೌರ ಫಲಕಗಳು, ಗಾಳಿ ಗಿರಮಿಗಳು ಮತ್ತು ಗೋಬರ್ ಬೈಯೋಮಾಸ್ ಸ್ಥಾವರಗಳನ್ನು ಪ್ರೋತ್ಸಾಯಿಸುವುದು,
3) ಆಹಾರ ಸಂಸ್ಕರಣ ಘಟಕಗಳ ಗುರುತಿಸುವಿಕೆ ಹಾಗೂ ಅಭಿವೃದ್ಧಿ
4) ಗ್ರಾಮೀಣ ಪ್ರದೇಶಗಳಲ್ಲಿ ತಯಾರಿಸಲಾದ ಗ್ರಾಮೀಣ ವಸ್ತುಗಳಿಗಾಗಿ ಪ್ರದರ್ಶನ ಮಳಿಗೆ, ಮಾರುಕಟ್ಟೆ ಸಂಕೀರ್ಣಗಳನ್ನು ಗುರುತಿಸುವುದು ಹಾಗೂ ಆಯೋಜಿಸುವುದು,
5) ಜಿಲ್ಲಾ ಪಂಚಾಯಿತಿಗಳ ಗಣಕೀಕರಣ, ಡಾಟಾಬೇಸ್ ಹಾಗೂ ಲೆಕ್ಕ ಪತ್ರ ನಿರ್ವಹಣೆ ಮತ್ತು ಸೃಜನೆ.
6) ಗ್ರಾಮೀಣ ಕ್ರೀಡಾಂಗಣ.
7) ಬಯಲು ರಂಗಮಂದಿರ.

<u>ಕರ್ನಾಟಕ ವಿಧಾನ ಸಭೆ</u>

186 ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ)

ಅ. ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಮಳೆ ನೀರು ಕೊಯ್ಲು ಕಾರ್ಯಕ್ರಮದಲ್ಲಿ ಹಣ ಮಂಜೂರಾಗಿರುವುದು ನಿಜವೇ;

ನಿಜ

ಆ. ಕೋಲಾರ ಜಿಲ್ಲೆಯಿಂದ ಇತ್ತೀಚೆಗೆ ಚಿಕ್ಕಬಳ್ಳಾಪುರ ಜಿಲ್ಲೆ ವಿಂಗಡಣೆಯಾಗಿದ್ದು, ಈ ಜಿಲ್ಲೆಯಲ್ಲಿಯೂ ಸಹ ತೀವ್ರ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.